ವಿಷಯ: 2003–04ರಲ್ಲಿ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಗೆ ಅನುದಾನ

3352 (2992) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002–03ನೇ ಸಾಲಿನಲ್ಲಿ ಶಾಸಕರುಗಳಿಗೆ ಕ್ಷೇತ್ರಾಭಿವೃದ್ಧಿ ನಿಧಿಗೆ ಮೊಸಲಾಗಿಟ್ಟಿರುವ ಅನುದಾನ ಎಷ್ಟು?

ಇಲ್ಲಿಯವರೆಗೆ ಪ್ರತಿಯೊಬ್ಬ ಶಾಸಕರಿಗೆ ಬಿಡುಗಡೆ ಮಾಡಿರುವ ಹಣವೆಷ್ಟು?

ಉಳಿದ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಆ) 2003–04ನೇ ಸಾಲಿನ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಗೆ ಅನುದಾನವನ್ನು ಮೊಸಲಾಗಿರಿಸಿದೆಯೇ? ಇದ್ದಲ್ಲಿ ಅದರ ವಿವರಗಳೇನು?

ಶ್ರೀ ಆರ್.ಬಿ. ತಿಮ್ಮಾಪುರ (ಯೋಜನಾ ಸಚಿವರು):

ಅ) ಶಾಸಕರ ಒಟ್ಟು 120 ಕೋಟಿ ಈ ನಿಧಿಯಿಂದ 31–10ಕೋಟಿ ವಿವರಗಳು ಈ ಕೆಳಗಿನಂತಿವೆ ತಲಾ ರೂ 10 ಲಕ್ಷಗಳಂತೆ

ಅ) 224 ವಿಧಾನ ಸಭೆ ಶಾಸಕರಿಗೆ	22.40 ಕೋಟಿ
ಆ) ಒಬ್ಬ ನಾಮ ನಿರ್ದೇಶನ ಶಾಸಕರು	0.10 ಕೋಟಿ
ಇ) 75ವಿಧಾನ ಪರಿಷತ್ ಶಾಸಕರು	7.50 ಕೋಟಿ
ಈ) 6 ನಿವೃತ್ತ ವಿಧಾನ ಪರಿಷತ್ ಸದಸ್ಯರು	0.60 ಕೋಟಿ
ಉ) 5 ಚಾಮರಾಜನಗರ ಜಿಲ್ಲೆಯ ವಿಧಾನ ಸಭಾ ಸದಸ್ಯರು (ಎರಡನೇ ಕಂತು)	0.50 ಕೋಟಿ
ಒಟ್ಟು	31.10 ಕೋಟಿ

2002–03ನೇ ಆರ್ಥಿಕ ವರ್ಷ ಮುಕ್ತಾಯಗೊಂಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಹೌದು ಪ್ರತಿ ಶಾಸಕರಿಗೆ ತಲಾ 40 ಲಕ್ಷಗಳಂತೆ 300 ಶಾಸಕರಿಗೆ ಒಟ್ಟು 120ಕೋಟಿ ರೂ.ಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ.

ನ್ಯಾಯಾಲಯಗಳಿಗೆ ಅನುದಾನ

3384 (3995) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅಧೀನ ಜಿಲ್ಲಾ ನ್ಯಾಯಾಲಯಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಆ) ಕಳೆದ ಮೂರು ಸಾಲಿನ ಆಯವ್ಯಯದಲ್ಲಿ ನ್ಯಾಯಾಲಯಗಳಿಗೆ ನಿಗದಿ ಮಾಡಿದ ಅನುದಾನ ಎಷ್ಟು? ಬಿಡುಗಡೆ ಮಾಡಿದ ಹಣ ಎಷ್ಟು?

ಇ) ಈ ಅನುದಾನದಲ್ಲಿ ಕೋರ್ಟಿಗೆ ಬರುವ ಕಕ್ಷಿದಾರರು, ಪೋಲೀಸರು, ವಕೀಲರು, ಸಾಕ್ಷಿದಾರರ ಅನುಕೂಲಕ್ಕಾಗಿ ಕೋರ್ಟಿನ ಅವರಣದಲ್ಲಿ ಕೊಠಡಿ, ಪೀಠೋಪಕರಣ, ಶೌಚಾಲಯ, ಕುಡಿಯುವ ನೀರು ಇತ್ಯಾದಿಗಳಿಗೆ ವಿನಿಯೋಗಿಸಿದ ಹಣ ಎಷ್ಟು (ಜಿಲ್ಲಾವಾರು ವಿವರ ನೀಡುವುದು ಮತ್ತು ಶಿವಮೊಗ್ಗ ಜಿಲ್ಲೆಯ ಕೋರ್ಟುವಾರು ವಿವರ ನೀಡುವುದು)